**0203**

**Second Semester of Three Year LL.B. Examination, January 2011**
**PROPERTY LAW (Course – III)**

Duration : 3 Hours Max. Marks : 100

**Instructions** :
1. Answer **all** Questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the **right** indicate marks.
4. Answers should be written **either** in English or Kannada **completely**.

**UNIT – I**

Q. No. 1. (a) "The General rule is that property of any kind may be transferred". Explain the statements with exceptions. Marks : 15

''ಯಾವ ರೀತಿಯ ಆಸ್ತಿಯನ್ನಾದರೂ ವರ್ಗಾವಣೆ ಮಾಡಬಹುದೆಂಬುದು ಸಾಮಾನ್ಯ ನಿಯಮ''. ಈ ಹೇಳಿಕೆಯನ್ನು ಅಪವಾದಗಳೊಂದಿಗೆ ವಿವರಿಸಿರಿ.

OR/**ಅಥವಾ**

Explain the provisions of Transfer of Property Act, 1882 relating to direction for accumulation of income.

ಆದಾಯ ಸಂಚಯಗೊಳಿಸಬೇಕೆಂಬ ನಿರ್ದೇಶನದ ಕುರಿತು, ಸ್ವತ್ತು ಹಸ್ತಾಂತರಣ ಅಧಿನಿಯಮ, 1882 ದಲ್ಲಿರುವ ಉಪಬಂಧಗಳನ್ನು ವಿವರಿಸಿರಿ.

(b) 'X' sells his house to 'Y' with a condition that 'Y' should not alienate it without the consent of 'X'. Is this condition valid ? Marks : 5

'X' ಎಂಬವನು ತನ್ನ ಮನೆಯನ್ನು 'Y' ಎಂಬವನಿಗೆ ಮಾರಾಟ ಮಾಡಿ, ತನ್ನ ಸಮ್ಮತಿ ಇಲ್ಲದೆ 'Y' ನು ಅದನ್ನು ವರ್ಗಾಯಿಸಬಾರದೆಂಬ ಷರತ್ತು ಹಾಕಿದ್ದಾನೆ. ಈ ಷರತ್ತು ಊರ್ಜಿತವೆ ?

OR/**ಅಥವಾ**

A property is transferred to 'A' for life, then to his first son (unborn) for life and then to 'B' absolutely. Is the transfer valid ?

ಒಂದು ಸ್ವತ್ತನ್ನು 'ಅ' ನ ಜೀವಾವಧಿವರೆಗೆ ನಂತರ ಅವನಿಗೆ ಹುಟ್ಟುವ ಮೊದಲ ಮಗನಿಗೆ ಜೀವಾವಧಿವರೆಗೆ ಮತ್ತು ನಂತರ 'ಬ' ನಿಗೆ ಸಂಪೂರ್ಣವಾಗಿ ಹಸ್ತಾಂತರಿಸಲಾಗಿದೆ. ಈ ಹಸ್ತಾಂತರಣವು ಊರ್ಜಿತವೇ ?

**P.T.O.**

## UNIT – II

Q. No. 2. (a) Discuss the provisions of Transfer of Property Act relating to the transfer of property by the ostensible owner. Marks : 15

ತೋರಿಕೆಯ ಯಜಮಾನನಿಂದ ಮಾಡುವ ಸ್ವತ್ತು ಹಸ್ತಾಂತರಣ ಕುರಿತು ಸ್ವತ್ತು ಹಸ್ತಾಂತರಣ ಅಧಿನಿಯಮದಲ್ಲಿರುವ ಉಪಬಂಧಗಳನ್ನು ಚರ್ಚಿಸಿರಿ.

OR/**ಅಥವಾ**

Explain the protection given in respect of improvements made by bona fide holders under defective titles.

ದೋಷಪೂರಿತ ಹಕ್ಕುಳ್ಳವನಿಂದ ಸದ್ಭಾವನೆಯಿಂದ ಮಾಡಿದ ಸುಧಾರಣೆಗಳಿಗೆ ಇರುವ ರಕ್ಷಣೆಗಳನ್ನು ವಿವರಿಸಿರಿ.

(b) 'A' transfers to 'B' an estate to which 'C' is entitled, and as a part of the same transaction gives 'C' a coal mine. 'C' takes the coal mine and exhausts it. Has 'C' confirmed the transfer of his estate to 'B' ? Marks : 5

'ಅ' ನು 'ಬ' ನಿಗೆ 'ಕ' ಎಂಬವನಿಗೆ ಸೇರಿದ ಸ್ವತ್ತನ್ನು ಹಸ್ತಾಂತರಿಸಿ, ಅದೇ ವ್ಯವಹಾರದ ಭಾಗವಾಗಿ ತನಗೆ ಸೇರಿದ ಕಲ್ಲಿದ್ದಲು ಗಣಿಯನ್ನು 'ಕ' ನಿಗೆ ಕೊಡುತ್ತಾನೆ. 'ಕ' ನು ಕಲ್ಲಿದ್ದಲು ಗಣಿ ಸ್ವಾಧೀನ ಪಡೆದು ಗಣಿಯನ್ನು ಖಾಲಿ ಮಾಡುತ್ತಾನೆ. 'ಕ' ನು 'ಬ' ನಿಗೆ ಮಾಡಿದ ತನ್ನ ಸ್ವತ್ತಿನ ಹಸ್ತಾಂತರಣವನ್ನು ಮಾನ್ಯ ಮಾಡಿದಂತಾಯಿತೇ ?

OR/**ಅಥವಾ**

'A' sues 'B' in respect of a house in 'B's possession. During the pendency of suit 'B' sells the house to 'C'. 'A' suit is decreed. Is 'C' bound by the decree.

'ಅ' ನು 'ಬ' ನ ಸ್ವಾಧೀನದಲ್ಲಿರುವ ಒಂದು ಮನೆಗಾಗಿ 'ಬ'ನ ವಿರುದ್ಧ ಒಂದು ದಾವೆ ಹೂಡುತ್ತಾನೆ. ದಾವೆ ಇನ್ನೂ ಇತ್ಯರ್ಥವಾಗುವ ಮುಂಚಿತವಾಗಿಯೆ 'ಬ' ನು ಆ ಮನೆಯನ್ನು 'ಕ' ನಿಗೆ ಮಾರುತ್ತಾನೆ. ದಾವೆಯು 'ಅ' ನ ಪರವಾಗಿ ಡಿಕ್ರಿ (ತೀರ್ಪು) ಆಗುತ್ತದೆ. 'ಕ' ನು ಈ ಡಿಕ್ರಿ (ತೀರ್ಪು)ಗೆ ಬದ್ಧನಾಗುವನೆ ?

## UNIT – III

Q. No. 3. (a) Define mortgage. Explain the essentials of a mortgage by deposit of title deeds. Marks : 15

ಅಡಮಾನವನ್ನು ವ್ಯಾಖ್ಯಾನಿಸಿರಿ. ಒಂದು ಹಕ್ಕು ಪತ್ರಗಳ ಠೇವಣಿ ಮೂಲಕದ ಅಡಮಾನದ ಅವಶ್ಯಕತೆಗಳನ್ನು ವಿವರಿಸಿರಿ.

OR/**ಅಥವಾ**

"Once a mortgage is always a mortgage'. Discuss.

"ಒಮ್ಮೆ ಅಡಮಾನವು ಯಾವಾಗಲು ಅಡಮಾನವೇ ಆಗಿರುತ್ತದೆ". ಚರ್ಚಿಸಿರಿ.

(b) Write a note on 'charge'. Marks : 5

'ಪ್ರಭಾರ'ದ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

'Write a note on 'simple mortgage'.

'ಸರಳ ಅಡಮಾನದ' ಬಗ್ಗೆ ಟಿಪ್ಪಣಿ ಬರೆಯಿರಿ.

**UNIT – IV**

Q. No. 4. (a) Define sale. Distinguish it with contract for sale. Marks : 15

ಮಾರಾಟವನ್ನು ವ್ಯಾಖ್ಯಾನಿಸಿರಿ ಮತ್ತು ಅದನ್ನು ಮಾರಾಟಕ್ಕಾಗಿ ಒಪ್ಪಂದದೊಂದಿಗೆ ವಿಂಗಡಿಸಿರಿ.

OR/**ಅಥವಾ**

Explain the rights and liabilities of a lessor.

ಗೇಣಿದಾತನ ಹಕ್ಕು ಮತ್ತು ಭಾಧ್ಯತೆಗಳನ್ನು ವಿವರಿಸಿರಿ.

(b) 'A' makes a gift to 'B', 'C' and 'D'. 'B' and 'C' accept the gift, while 'D' refuses. Decide the validity of the gift. Marks : 5

'ಅ' ನು 'ಬ', 'ಕ' ಮತ್ತು 'ಡ' ನಿಗೆ ಒಂದು ದಾನವನ್ನು ಮಾಡುತ್ತಾನೆ. 'ಬ' ಮತ್ತು 'ಕ' ಆ ದಾನವನ್ನು ಸ್ವೀಕರಿಸುತ್ತಾರೆ. ಆದರೆ 'ಡ' ನು ಅದನ್ನು ತಿರಸ್ಕರಿಸುತ್ತಾನೆ. ಈ ದಾನದ ಕ್ರಮಬದ್ದತೆಯನ್ನು ತೀರ್ಮಾನಿಸಿರಿ.

OR/**ಅಥವಾ**

'A' lets a farm to 'B' for the life of 'C'. 'C' dies, but 'B' continues in possession with 'A' s consent. What is the effect of such possession ?

'ಎ' ಯು ಒಂದು ಸ್ಥಿರ ಸ್ವತ್ತನ್ನು 'ಬ' ನಿಗೆ 'ಕ' ನ ಜೀವಾವಧಿವರೆಗೆಂದು ಗೇಣಿ ಕೊಟ್ಟಿರುತ್ತಾನೆ. 'ಕ' ನು ಮೃತನಾಗುತ್ತಾನೆ, ಆದರೆ 'ಬ' ನು 'ಅ' ನ ಆನುಮತಿಯೊಂದಿಗೆ ಸ್ವತ್ತಿನ ಸ್ವಾಧೀನತೆಯನ್ನು ಮುಂದುವರಿಸುತ್ತಾನೆ. ಈ ಸ್ವಾಧೀನತೆಯ ಪರಿಣಾಮವೇನು ?

## UNIT – V

Q. No. 5. (a) Define Trust. Distinguish it with debt and Bailment. Marks : 15

ನ್ಯಾಸವನ್ನು ವ್ಯಾಖ್ಯಾನಿಸಿ ಮತ್ತು ಅದನ್ನು ಸಾಲ ಮತ್ತು ನಿಕ್ಷೇಪಣೆಗಳಿಂದ ವಿಂಗಡಿಸಿ.

OR/**ಅಥವಾ**

What are the duties and liabilities of Trustees ?

ನ್ಯಾಸಧಾರಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಾವುವು ?

(b) Write a note on “Public Trust’. Marks : 5

‘‘ಸಾರ್ವಜನಿಕ ನ್ಯಾಸ’’ ಕುರಿತು ಲಘು ಟಿಪ್ಪಣಿ ಬರೆಯಿರಿ.

OR/**ಅಥವಾ**

Write a note on extinction of trust.

ನ್ಯಾಸವು ನಾಶವಾಗುವ ಕುರಿತು ಲಘು ಟಿಪ್ಪಣಿ ಬರೆಯಿರಿ.

______________